ಹೇಳುವುದು ಒಂದು, ಮಾಡುವುದು ಒಂದು ನನಗೆ ಅರ್ಥವಾಗುತ್ತಿಲ್ಲ. ಜಡ್ಜ್‌ಮೆಂಟ್ ಕೊಟ್ಟಮೇಲೆ, ಪರಿಶೀಲನೆಮಾಡಿ ಕೊಡಬೇಕೆಂದು ಹೇಳಿದ ಮೇಲೆ, ಇನ್ನೂ ಮಾತುಕತೆಯಾಗಿಲ್ಲವೆಂದು ಹೇಳುತ್ತಿದ್ದಾರೆ. ನಾವೀಗ ಇದನ್ನು ಬೇರೆ ರೀತಿಯಲ್ಲಿ ತಿಳಿದುಕೊಳ್ಳಬೇಕಾಗುತ್ತದೆ. ಅಧಿಕಾರಿಗಳು ಇವತ್ತು ಬನ್ನಿ, ನಾಳೆ ಬನ್ನಿ ಎಂದು ಹೇಳುತ್ತಿದ್ದಾರೆ. ನಾಲ್ಕೈದು ವರ್ಷಗಳಿಂದ ಪರಿಸ್ಥಿತಿ ಗಂಭೀರವಾಗಿದೆ. ಮೌಲ್ಯಧಾರಿತ ಎಂದು ಹೇಳುವ ತಾವು, ನಿಮ್ಮ ಅಧಿಕಾರಿಗಳಿಗೆ ಮೌಲ್ಯವಿಜಯೇ ಎಂಬುದನ್ನು ಕಂಡುಕೊಳ್ಳಬೇಕಾಗಿದೆ.

ಶ್ರೀ ಜೆ. ಎಸ್. ದೇಶಮುಖ್.—ಸಂಡೂರು ತಾಲ್ಲೂಕಿನ ಆರ್‌ಎಂ. ಬ್ಲಾಕಿನ 400 ಎಕರೆ ಪ್ರದೇತದಲ್ಲಿ ಶ್ರೀ ಅಬ್ದುಲ್ ರಜಾಕ್ ಸಾಹೇಬರಿಗೆ ಗಣಿ ಗುತ್ತಿಗೆ ಮಂಜೂರು ಮಾಡಲಾಗಿದೆ. ಮಂಜೂರು ಮಾಡಿದ ಪ್ರದೇಶವನ್ನು ಅಭ್ಯರ್ಥಿಯು ಒಪ್ಪಿಕೊಳ್ಳದ ಕಾರಣ ಗುತ್ತಿಗೆ ಕರಾರು ಪತ್ರವನ್ನು ಎಕ್ಸಿಕ್ಯೂಟ್ ಮಾಡುವುದು ವಿಳಂಬವಾಯಿತು. ಹಾಗೂ ಸದರಿ ವಿಷಯದಲ್ಲಿ ಸರ್ಕಾರ ಮತ್ತು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಮಧ್ಯೆ ಪತ್ರ ವ್ಯವಹಾರ ನಡೆಯುತ್ತಿತ್ತು. ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಈಗಾಗಲೇ ಹೊರಡಿಸಿರುವ ಸರ್ಕಾರಿ ಆದೇಶವನ್ನು ಕಾರ್ಯಗತಗೊಳಿಸುವಂತೆ ಹಾಗೂ ಅಭ್ಯರ್ಥಿಗೆ ಗುತ್ತಿಗೆ ಕರಾರನ್ನು ಎಕ್ಸಿಕ್ಯೂಟ್ ಮಾಡಿಕೊಡಲು ಈ ಕೂಡಲೇ ಕ್ರಮವನ್ನು ಕೈಗೊಳ್ಳುವಂತೆ ನಿರ್ದೇಶನವೀಯಲಾಗಿದೆ.

ಶ್ರೀ ಎಂ. ರಾಮಪ್ಪ.—ಕೋರ್ಟು ತೀರ್ಮಾನವನ್ನು ಕೊಟ್ಟಿದೆ. ಆ ತೀರ್ಮಾನವನ್ನು ಕೊಟ್ಟ ಮೇಲೆ ಪ್ಲಾನ್ ಕೊಡಿ ಅಂತ ಹೇಳಿದರು. ಪ್ಲಾನ್ ಅನ್ನು ಮೊದಲೇ ಕೊಟ್ಟಿದೆ. ಆ ಪ್ಲಾನ್ ಅನ್ನು ಕೊಟ್ಟಮೇಲೂ ಸಹ ಎಲ್ಲಿ ಮೈನಿಂಗ್ ಏರಿಯಾ ಇಲ್ಲ ಅದನ್ನೆಲ್ಲಾ ಇನ್‌ಕ್ಲೂಡ್ ಮಾಡಿ ತೆಗೆದುಕೊಳ್ಳಿ ಅಂತ ಹೇಳುತ್ತಿದ್ದಾರೆ. ಮೊದಲು ಯಾವುದು ಪ್ಲಾನ್‌ನಲ್ಲಿ ನಮೂದು ಮಾಡಿ ಕೊಟ್ಟಿದೆ ಅದನ್ನೇ ಕೊಡಬೇಕೆಂದು ಹೈಕೋರ್ಟಿನವರು ತೀರ್ಮಾನ ಕೊಟ್ಟಿದ್ದು ಹೈಕೋರ್ಟಿನ ಆದೇಶ ಏನು ಇದೆ ಅದರ ಪ್ರಕಾರ ಕೊಡಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಹೈಕೋರ್ಟಿನವರು ಅವರು ಕೇಳಿದ ಸ್ಥಳವನ್ನೇ ಕೊಡಿ ಎಂಬುದಾಗಿ ಸರ್ಕಾರಕ್ಕೇನೂ ಆದೇಶವನ್ನು ಕೊಟ್ಟಿಲ್ಲ. 400 ಎಕರೆ ಕೊಡಬೇಕೆಂದು ಆದೇಶ ನೀಡಿದೆ. ಈಗ ಹಾಲಿ ಇರುವಂತಹ ಜಮೀನಿನ ಜೊತೆಗೆ ಪಕ್ಕದಲ್ಲೇ ಇರುವ 175ಕ್ಕಿಎಕರೆಯನ್ನು ಸೇರಿಸಿ ಕೊಡುವುದಕ್ಕೆ ಈಗಾಗಲೇ ಏರ್ಪಾಡು ಮಾಡಿದ್ದೇವೆ. ಅಗ್ರಿಮೆಂಟ್ ಬಾಂಡ್ ಕೊಟ್ಟರೆ ಇವತ್ತೇ ಅವರಿಗೆ ಆ ಜಮೀನನ್ನು ಬಿಟ್ಟು ಕೊಡುತ್ತೇವೆ.

ವಿಷಯ : ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಬಗ್ಗೆ.

ಪ್ರ. ಸಂಖ್ಯೆ 65 (215) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು;

ಆ) ಇವುಗಳ ಪೈಕಿ ಖಾಸಗಿ ಕಾರ್ಖಾನೆಗಳ ಸಂಖ್ಯೆ ಎಷ್ಟು ? ಮತ್ತು ಸಹಕಾರಿ ರಂಗದಲ್ಲಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು ;

ಇ) ಬೆಳಗಾಂ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳು ಎಷ್ಟು ;

ಈ) ಈ ಸಕ್ಕರೆ ಕಾರ್ಖಾನೆಗಳಲ್ಲಿ ಲಾಭದಾಯಕವಾಗಿ ನಡೆಯುತ್ತಿರುವ ಕಾರ್ಖಾನೆಗಳು ಯಾವುವು: ಹಾಗೂ ನಷ್ಟದಲ್ಲಿ ನಡೆಯುತ್ತಿರುವ ಕಾರ್ಖಾನೆಗಳು ಯಾವುವು ;

ಉ) ನಷ್ಟದಲ್ಲಿರುವ ಕಾರ್ಖಾನೆಗಳ ಬಗ್ಗೆ ಸರ್ಕಾರದವರು ತಳೆದಿರುವ ಧೋರಣೆ ಏನು ;

ಊ) 1985–86ನೇ ಸಾಲಿನಲ್ಲಿ ಹೊಸ ಕಾರ್ಖಾನೆಗಳಿಗೆ ಅನುಮತಿ ನೀಡುವ ಯೋಚನೆ ಸರ್ಕಾರಕ್ಕೆ ಇದೆಯೆ ? ಹಾಗಿದ್ದಲ್ಲಿ ಅದರ ವಿವರಗಳೇನು ?

ಶ್ರೀ ಜೆ. ಹೆಚ್. ಪಟೀಲ್ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು).—

ಅ) 27

ಆ) ಸಹಕಾರಿ ವಲಯದಲ್ಲಿ 16
ಖಾಸಗೀ ವಲಯದಲ್ಲಿ 11

ಇ) 6

ಈ) ಲಾಭದಲ್ಲಿ ನಡೆಯುತ್ತಿರುವ ಕಾರ್ಖಾನೆಗಳು

1. ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ (ಸಹಕಾರಿ ವಲಯದಲ್ಲಿ)
2. ಉಗರ್ ಸುಗರ್ ವರ್ಕ್ಸ್ ಲಿಮಿಟೆಡ್, ಉಗರ್ (ಖಾಸಗೀ ವಲಯದಲ್ಲಿ)

ನಷ್ಟದಲ್ಲಿ ನಡೆಯುತ್ತಿರುವ ಕಾರ್ಖಾನೆಗಳು

1. ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಎಂ. ಕೆ. ಹುಬಳಿ.
2. ದೂದಗಂಗಾ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ.
3. ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ.
4. ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಗೋಕಾಕ್ (ಎಲ್ಲಾ ಸಹಕಾರಿ ವಲಯದಲ್ಲಿ).

ಊ) ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಸಾಲದ ರೂಪದಲ್ಲಿ ಧನ ಸಹಾಯವನ್ನು ಮಾಡುವುದು ಮತ್ತು ಬೇರೆ ಸಂಸ್ಥೆಗಳಿಂದ ಹಣ ಕೊಡಿಸುವ ವ್ಯವಸ್ಥೆ ಮಾಡುವುದು ಸರ್ಕಾರದ ಧೋರಣೆ.

ಋ) ಭಾರತ ಸರ್ಕಾರದಿಂದ ನಾಲ್ಕು ಕೆಳಕಂಡ ಕಾರ್ಖಾನೆಗಳ ಅರ್ಜಿಗಳಿಗೆ ಅನುಮತಿ ಬರ ಬೇಕಾಗಿದೆ.

1) ಖಾನಾಪುರ
2) ಅಥಣಿ
3) ತೆರದಾಳ್
4) ಬೀದರ್

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಗೆ ಲೈಸೆನ್ಸ್ ಸಿಕ್ಕಿದೆ. ಅದೇ ರೀತಿ ಅಥಣಿ ಹತ್ತಿರ ಸಕ್ಕರೆ ಕಾರ್ಖಾನೆಯನ್ನು ಹಾಕಲು 1981-82ನೇ ಸಾಲಿನಲ್ಲಿ ಲೈಸನ್ಸ್‌ಗಾಗಿ ಅರ್ಜಿ ಹಾಕಿದ್ದಾರೆ. ಆದರೆ ಇದುವರೆವಿಗೂ ಲೈಸನ್ಸ್ ಅವರಿಗೆ ಸಿಕ್ಕಿಲ್ಲ. ಅದು ಕೇಂದ್ರ ಸರ್ಕಾರದಲ್ಲಿದೆಯೋ ? ಅಥವಾ ರಾಜ್ಯ ಸರ್ಕಾರದಲ್ಲಿ ನಿಂತಿದೆಯೋ ತಿಳಿಸುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಅದು ಕೇಂದ್ರ ಸರ್ಕಾರದಲ್ಲಿದೆ.

ಶ್ರೀ ಮಲ್ಲಾರೆಗೌಡ ಎಸ್. ಪಾಟೀಲ್.—ಈ ವಿಷಯದಲ್ಲಿ ನಾನು ಸರ್ಕಾರಕ್ಕೆ ತಮ್ಮ ಮೂಲಕ ಮನವಿ ಮಾಡಿಕೊಳ್ಳುವುದೇನೆಂದರೆ, ಇಡೀ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಸಕ್ಕರೆ ಕಾರ್ಖಾನೆಗಳನ್ನು ಒಟ್ಟಿಗೆ ತರುವಂತಹ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆಯೇ ? ಕಾರ್ಖಾನೆ ಏನು ಚೆನ್ನಾಗಿ ನಡೆದಿದೆಯೋ ಅಥವಾ ಅಡಳಿತವನ್ನು ತಪಸೀಲಾಗಿ ನಡೆಸುತ್ತಿದ್ದಾರೋ ಎಂಬುದು ಎಲ್ಲರಿಗೂ ಗೊತ್ತಾಗಬೇಕಲ್ಲ. ಅದನ್ನು ಹೇಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಚೆನ್ನಾಗಿ ನಡೆಯುತ್ತಿರತಕ್ಕಂತಹ ಕಾರ್ಖಾನೆಯನ್ನು ಚೆನ್ನಾಗಿ ನಡೆಯುತ್ತಿದೆ ಎಂಬುದಾಗಿ ಹೇಳುವುದಕ್ಕೆ ಅಂಜಿಕೆ ಏಕೆ ? ಯಾರಾದರೂ ನಡೆಸಲಿ ಬಿಡಿ. ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ಚೆನ್ನಾಗಿ ನಡೆಯುತ್ತಿದೆ, ಅದು ಮಾನ್ಯ ಮಲ್ಲಾರಿಗೌಡ ಪಾಟೀಲ್ ರವರಿಗೆ ಚೆನ್ನಾಗಿ ಕಾಣಿಸದಿದ್ದರೆ ಅದಕ್ಕೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಅದು ಚೆನ್ನಾಗಿ ನಡೆಯುತ್ತಿದೆ. ಇಡೀ ಸಹಕಾರಿ ವಲಯದಲ್ಲಿ ಬಹುಶಃ ಭಾರತದಲ್ಲೇ ಇಷ್ಟೊಂದು ಉತ್ತಮವಾದ ಕಾರ್ಖಾನೆ ಬೇರೊಂದಿಲ್ಲ. ಆಮೇಲೆ ಮಾನ್ಯ ಸದಸ್ಯರು ಇನ್ನೊಂದು ಲೈಸನ್ಸ್ ಬಗ್ಗೆ ಪ್ರಶ್ನೆಯನ್ನು ಕೇಳಿದರು. ಮೊನ್ನೆ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಮನವಿಯನ್ನು ಮಾಡಿದ್ದೇವೆ. ನೀವು ಯೋಜನೆಯಲ್ಲಿ ಯಾವ ಪ್ರದೇಶದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆ ಬೇಕು ಎನ್ನುವುದನ್ನು ನಿಗದಿ ಮಾಡಬೇಕು, ಮತ್ತೆ ರಾಜ್ಯ ಸರ್ಕಾರಗಳಿಗೆ ಅವರ ಅನುಕೂಲಕ್ಕೆ ತಕ್ಕಂತೆ ಲೈಸನ್ಸ್ ಕೊಡತಕ್ಕ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಅವರು ಅದನ್ನು ಕನ್ಸಿಡರ್ ಮಾಡಬಹುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ವ್ಯಾಪ್ತಿಗೆ ರಾಜ್ಯದಲ್ಲಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡುವ ಸಲುವಾಗಿ ಒಳಪಡಿಸುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಈಗ ಇರುವ ಎಲ್ಲಾ ಕಾರ್ಖಾನೆಗಳಲ್ಲೂ ಡಿಟಿಂಗ್ ಇದೆ. ಎಲ್ಲವನ್ನೂ ಒಂದೇ ಆಡಿಟಿಂಗ್ ಸಿಸ್ಟಂನಲ್ಲಿ ತರುವುದಕ್ಕೆ ಹಾಗೇನಿಲ್ಲ.

ಶ್ರೀ ಮಲ್ಲಾರಿಗೌಡ.—ಎಲ್ಲಾ ಸಕ್ಕರೆ ಕಾರ್ಖಾನೆಗಳನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ವಹಿಸಿಕೊಡುತ್ತೀರಾ ? ಅವುಗಳ ಲೆಕ್ಕ ಪತ್ರಗಳನ್ನು ತಪಾಸಣೆ ಮಾಡುವ ಸಲುವಾಗಿ ಆ ಬಗ್ಗೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಆ ಬಗ್ಗೆ ತನಿಖೆ ನಡೆಸುವುದಕ್ಕೆ ಯಾರೂ ಅಡ್ಡಿ ಬರುವುದಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಸಹಕಾರಿ ಕಾನೂನು ಪ್ರಕಾರ ಅದರ ವ್ಯಾಪ್ತಿಗೆ ಬರುವುದಿಲ್ಲ. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಇದು. ಅಲ್ಲಿ ನಮ್ಮಂತಹವರು ಯಾರೋ ಒಬ್ಬರು ಛೇರ್ಮನ್‌ರು ಇದ್ದುಕೊಂಡು ಅವರ ಮನಸ್ಸಿಗೆ ಬಂದ ಹಾಗೆ ನಡೆಸುತ್ತಿದ್ದಾರೆ. ಇದನ್ನು ಯಾರಿಗಾದರೂ ವಹಿಸಿಕೊಡುತ್ತೀರಾ ಎಂಬುದರ ಬಗ್ಗೆ ನಿರ್ದಿಷ್ಟವಾದ ಉತ್ತರ ಬೇಕು.

ಶ್ರೀ ಎಂ ಎಸ್. ಕೃಷ್ಣನ್.—ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವ್ಯಾಪ್ತಿಯಲ್ಲಿ ಬರುವ ಹಾಗೆ ವಿಶೇಷವಾಗಿ ಮಾಡುತ್ತೀರಾ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಜೆ. ಹೆಜ್. ಪಟೇಲ್.—ಆ ಸಲಹೆ ಸೂಕ್ತವೆಂದು ಕಂಡು ಬಂದರೆ ಕಾನೂನನ್ನು ತಿದ್ದುಪಡಿ ಮಾಡುತ್ತೇನೆ.

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್.—ಇತ್ತೀಚೆಗೆ ಕೇಂದ್ರ ಸರ್ಕಾರದವರು ಗುಲ್ಬರ್ಗಾಕ್ಕೆ ಒಂದು ಲೈಸನ್ಸ್ ಕೊಟ್ಟಿದ್ದಾರೆಂದು ಗೊತ್ತಾಗಿದೆ. ಅದು ನಿಜವೇ ?

ಶ್ರೀ ಜೆ. ಹೆಚ್. ಪಟೇಲ್.—ಅದು ನನ್ನ ಗಮನಕ್ಕೆ ಬಂದಿಲ್ಲ. ಆಮೇಲೆ ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿಯ ಬಗ್ಗೆ ಮಾನ್ಯ ಮಲ್ಲಾರಿಗೌಡ ಎಸ್. ಪಾಟೀಲರವರು ಹೇಳಿದರು. ಸಹಕಾರಿ ಹಾಗೂ ಜಂಟಿ ವಲಯದಲ್ಲಿರತಕ್ಕಂತಹ ಸಕ್ಕರೆ ಕಾರ್ಖಾನೆಗಳಿಗೆ ಮೂಲ ಕಾರಣ ಕೇಂದ್ರ ಸರ್ಕಾರದ ದ್ವಿಮುಖ ನೀತಿ. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸ್ಪಷ್ಟ ಮಾಡಿದ್ದೇವೆ. ಅವರದು ಏನು ಡ್ಯೂಯಲ್ ಲೆವಿ ಪಾಲಿಸಿ ಇದೆ ಅಂದರೆ ಶೇಕಡ 65ರಷ್ಟನ್ನು ಲೆವಿ ಕೊಡಬೇಕು, ಇನ್ನುಳಿದ 35ರಷ್ಟನ್ನು ಹೊರಗಡೆ ಮಾರಾಟ ಮಾಡಬೇಕು ಎಂದು. ಹೊರಗಡೆ ಮಾರಾಟ ಮಾಡತಕ್ಕಂತಹದ್ದಕ್ಕೂ ಬೆಲೆ ಸಿಕ್ಕಲಿಲ್ಲ. ಮತ್ತೆ ಲೆವಿಯನ್ನು ಸರ್ಕಾರಕ್ಕೆ ಕೊಡಬೇಕು. ಈ ಎರಡು ಮೂಲ ಕಾರಣಗಳಿಂದ ಕಾರ್ಖಾನೆಗಳು ನಷ್ಟದಿಂದ ನಡೆಯುತ್ತಿವೆ.

ಶ್ರೀಮತಿ ಕೆ. ನಾಗರತ್ನಮ್ಮ.—ಸಹಕಾರಿ ಸಕ್ಕರೆ ಕಾರ್ಖಾನೆಗಳು ರಾಜ್ಯದಲ್ಲಿ 16 ಇವೆ. ಅವುಗಳ ಪೈಕಿ ಮಹದೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆಯು ಒಂದು. ಅದು ಈಗ ಸಿಕ್ ಯೂನಿಟಿ ಆಗಿ ಅಲ್ಲಿರುವ ಕೆಲಸಗಾರರೆಲ್ಲಾ ಮುಳುಗಿ ಹೋಗಿದ್ದಾರೆ. ಅವರಿಗೆ ಬೇರೆ ಕೆಲಸ ಇಲ್ಲ. ಅವರಿಗೆ ಬದಲಿ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ಅವರ ಪೈಕಿ ಕೆಲವರನ್ನು ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ತೆಗೆದುಕೊಂಡಿದ್ದಾರೆ. ಬಹಳ ಮಂದಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರೇ ಇದ್ದಾರೆ. ಮೊನ್ನೆ ಈ ಬಗ್ಗೆ ಮಾನ್ಯ ಗೋವಿಂದಗೌಡರನ್ನು ಕಂಡು ಆ ಮಡುಗರ ಅಪ್ಲಿಕೇಷನ್ ತೆಗೆದುಕೊಂಡು ಏನಾದರೂ ಮಾಡಿ ಸಹಾಯ ಮಾಡಿ ಹಾಳಾಗಿ ಹೋಗಿವ್ವಾರೆಂದು ಕೇಳಿದ್ದಕ್ಕೆ, ಅವರು ರೂಲ್ಸ್ ಪ್ರಕಾರ ಮಾಡುತ್ತೇನೆಂದರು. ಹಾಗಾದರೆ ರೂಲ್ಸ್ ಪ್ರಕಾರ ಕಾರ್ಖಾನೆಯನ್ನು ಮುಚ್ಚಿದ್ದೀರಾ ? ಆ ಕೆಲಸಗಾರರ ಗತಿ ಏನು ? ಅವರಿಗೆ ಏನಾದರೂ ಬದಲಿ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಈ ತರಹದ ರೋಗಗ್ರಸ್ಥ ಕಾರ್ಖಾನೆಗಳ ಬಗ್ಗೆ ಕ್ರಮ ಕೈಗೊಂಡು ಪುನಶ್ಚೇತನ ನೀಡಬಹುದೆಂದು ಮಾಡಿದ್ದೇವೆ, ಸರ್ಕಾರದ ಪರ್ಚೇಸ್ ಟ್ಯಾಕ್ಸ್ ಏನಿತ್ತು ಅದನ್ನು ಬಡ್ಡಿರಹಿತ ಸಾಲವಾಗಿ ಕೊಟ್ಟಿದ್ದೇವೆ. ಬೇರೆ ಹಣಕಾಸಿನ ಸಂಸ್ಥೆಗಳ ಮೂಲಕ ಸಕ್ಕರೆ ಕಾರ್ಖಾನೆಗಳ ಆರೋಗ್ಯ ಸುಧಾರಣೆ ಮಾಡಲು ಸಾಧ್ಯತೆ ಇದ್ದರೆ ಅದನ್ನು ಮಾಡುತ್ತಿದ್ದೇವೆ. ಕೇಂದ್ರದ ಹಣಕಾಸಿನ ಸಂಸ್ಥೆಗಳವರು ಕೊಟ್ಟಿರುವ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಸಮಯ ಕೇಳಿದ್ದೇವೆ. ಹೀಗೆಲ್ಲ ಕೆಲವು ಕ್ರಮಗಳನ್ನು ಕೈಗೊಂಡಿದ್ದೇವೆ. ಮಾನ್ಯ ಸದಸ್ಯರಿಯವರು ಹೇಳಿದ ಮಹದೇಶ್ವರ ಸಕ್ಕರೆ ಕಾರ್ಖಾನೆ ಬಗ್ಗೆ ಯಾರಾದರೂ ಮುಂದೆ ಬಂದು ಅವರ ಆರೋಗ್ಯ ಸುಧಾರಣೆಗೆ ಹಣ ಕೊಡುತ್ತೇವೆಂದರೆ ಅವರ ಬಗ್ಗೆಯೂ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ಎಂ ಪಾಟೀಲ್.—ಬೆಳಗಾಂ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ. ಆ ಪೈಕಿ ಘಟಪ್ರಭಾ ಸಕ್ಕರೆ ಕಾರ್ಖಾನೆಗೆ 57 ಲಕ್ಷ ರೂಪಾಯಿ ಸರ್ಕಾರದ ಧನ ಸಹಾಯ ಬರಬೇಕಾದುದು ಏನಿದೆ ಅದನ್ನು ಕೂಡಲೇ ಒದಗಿಸುತ್ತೀರಾ ? ಕೇಂದ್ರದ ತಾರತಮ್ಯ ನೀತಿಯಿಂದ ಇವತ್ತಿನ ದಿವಸ ಬೆಳಗಾಂ ಜಿಲ್ಲೆಯಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳ ಪರಿಸ್ಥಿತಿ ದುಸ್ಥಿತಿಗೆ ಬಂದಿದೆ. ಉದಾಹರಣೆಗೆ ಹೇಳಬೇಕಾದರೆ ಸಕ್ಕರೆ ಬಿಡುಗಡೆ ಮಾಡುವ ನೀತಿಯನ್ನು ಸರಿಯಾಗಿ ಪಾಲನೆ ಮಾಡುತ್ತಿಲ್ಲ ಕೆಲವು ಭಾಗಕ್ಕೆ ಜಾಸ್ತಿ ಕೆಲವು ಭಾಗಕ್ಕೆ ಕಡಿಮೆ ಕೊಡುತ್ತಾರೆ

ಅಧ್ಯಕ್ಷರು —ವಿಷಯಕ್ಕೆ ಸಂಬಂಧಪಟ್ಟ ಹಾಗೆ ಉಪ ಪ್ರಶ್ನೆಗಳನ್ನು ಕೇಳಿರಿ ಅಂದರೆ ಏನೇನೋ ಹೇಳುತ್ತೀರಲ್ಲ ?

ಶ್ರೀ ಆರ್. ಎಂ ಪಾಟೀಲ್—ಈ ರೀತಿಯ ಕೇಂದ್ರದ ನೀತಿಯಿಂದ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ ಅದನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು ಹಾಗೂ ಕೊಡಬೇಕಾದ ಹಣ ಏನಿದೆ ಅದನ್ನು ಕೂಡಲೇ ಒದಗಿಸಬೇಕು.

ಶ್ರೀ ಜೆ ಹೆಚ್ ಪಟೀಲ್ —ಕೇಂದ್ರ ಸರ್ಕಾರದ ನೀತಿಯಿಂದ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ ಎಂದು ಹೇಳಿದ್ದಾರೆ ಅವಕ್ಕೆ ಹಣಕಾಸಿನ ಸಹಾಯವನ್ನು ನಾವೇ ಒದಗಿಸಬೇಕೆಂದು ಹೇಳಿದ್ದಾರೆ. ಸಧ್ಯಕ್ಕೆ ನಮ್ಮ ಸರ್ಕಾರ ಹಣಕಾಸನ್ನು ಒದಗಿಸಿ ಸಕ್ಕರೆ ಕಾರ್ಖಾನೆಗಳನ್ನು ಉದ್ಧಾರ ಮಾಡತಕ್ಕ ಸ್ಥಿತಿಯಲ್ಲಿ ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ —ಕೇಂದ್ರ ಸರ್ಕಾರದ ಧೋರಣೆಯಿಂದ ಸಕ್ಕರೆ ಬೆಲೆಯಾಗಿದೆ ಎಂದು ತಿಳಿದು ಬರುತ್ತಿದೆ ಇದು ನಿಜವೇ ?

ಶ್ರೀ ಜೆ. ಹೆಚ್. ಪಟೀಲ್ —ಈ ವರ್ಷ ಕೇಂದ್ರ ಸರ್ಕಾರ ಲೆವಿ ರೇಟನ್ನು ಜಾಸ್ತಿ ಮಾಡಿದೆ ಮತ್ತು ಹೊರಗಡೆ ಮಾರ್ಕೆಟಿನಲ್ಲಿ ಕೂಡ ರೇಟ್ ಜೆನ್ನಾಗಿ ಇದೆ ಸಕ್ಕರೆಯನ್ನು ಆಗಾಗ್ಗೆ ಬಿಡುಗಡೆ ಮಾಡುವ ನೀತಿ ಏನಿದೆ ಆ ಬಗ್ಗೆ ಒತ್ತಾಯ ಮಾಡಿ ಆದಷ್ಟು ಹೆಚ್ಚಿನ ಸ್ವಾತಂತ್ರ್ಯವನ್ನು ನಮಗೆ ಕೊಡಿ ಎಂದು ಕೇಳುತ್ತಿದ್ದೇನೆ

ವಿಷಯ : ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ರಚಿತವಾಗಿರುವ ಚಂದ್ರಾ ಬಡಾವಣೆಗೆ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವ ಬಗ್ಗೆ

ಪ್ರ ಸಂಖ್ಯೆ 56 (8) ಶ್ರೀ ಎಂ ಪಿ. ಕೇಶವಮೂರ್ತಿ (ಆನೇಕಲ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯಶ್ರೀ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರಚಿಸಿರುವ ಚಂದ್ರಾ ಬಡಾವಣೆಯಲ್ಲಿ ಯಾವುದೇ ನಾಗರೀಕ ಸೌಲಭ್ಯಗಳನ್ನು ಒದಗಿಸಿಲ್ಲದೇ ಇರುವುದು ನಿಜವೇ ;

ಆ) ಹಾಗಿದ್ದಲ್ಲಿ 1975ರಲ್ಲಿಯೇ ರಚಿಸಿರುವ ಈ ಬಡಾವಣೆಯಲ್ಲಿ ಸದರಿ ಸೌಲಭ್ಯಗಳನ್ನು ಒದಗಿಸದಿರುವುದಕ್ಕೆ ಕಾರಣಗಳೇನು ;

ಇ) ಈ ಬಡಾವಣೆಯಲ್ಲಿ ನೀರಿನ ಸೌಲಭ್ಯ ಇಲ್ಲದೆ ಮನೆ ಕಟ್ಟಲು ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಈ ತೊಂದರೆಯನ್ನು ನಿವಾರಿಸಲು ಸಾಕಷ್ಟು ಕೊಳವೆ ಬಾವಿಗಳನ್ನಾದರೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಒದಗಿಸಿ ಕೊಡಲು ಕ್ರಮತೆಗೆದುಕೊಳ್ಳಲಾಗುವುದೆ :

ಈ) ಈ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಈಗ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಶ್ರೀ ಎ ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು)—

ಅ) ರಸ್ತೆ ಮತ್ತು ಒಳಚರಂಡಿ ಸೌಲಭ್ಯ ಮಾತ್ರ ಒದಗಿಸಿರುತ್ತದೆ ಉಳಿದ ಪೌರಸೌಲಭ್ಯಗಳನ್ನು ಒದಗಿಸಿರುವುದಿಲ್ಲ.

ಆ) ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲಾಗಿದೆ ಮತ್ತು ರಸ್ತೆಗಳನ್ನು ಮಾಡಲಾಗಿದೆ ನೀರಿನ ಸೌಲಭ್ಯಕ್ಕಾಗಿ ಹಣವನ್ನು ಜಲಮಂಡಲಿಗೆ ಸಂದಾಯ ಮಾಡಲಾಗಿದ್ದು, ಅವರು ಕೆಲಸವನ್ನು ಪ್ರಾರಂಭಿಸಲಿದ್ದಾರೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ನೀರಿನ ಸೌಲಭ್ಯವನ್ನು ಒದಗಿಸಲು 132 50 ಲಕ್ಷ ರೂ ಗಳನ್ನು ಜಲಮಂಡಲಿಗೆ ನೀಡಲಾಗಿದ್ದು, ಅವರು ಕೆಲಸಕ್ಕಾಗಿ ಟೆಂಡರ್ ಕರೆದಿದ್ದಾರೆಂದು ತಿಳಿದುಬಂದಿರುವುದರಿಂದ ಕೊಳವೆ ಬಾವಿಗಳನ್ನು ತೋರಿಸುವ ಅಗತ್ಯವಿರುವುದಿಲ್ಲ.

ಈ) ರಸ್ತೆ ನಿರ್ಮಾಣ, ಅಡ್ಡ ಸೇತುವೆಗಳ ನಿರ್ಮಾಣ, ಒಳಚರಂಡಿ ವ್ಯವಸ್ಥೆಯನ್ನು ಈಗಾಗಲೇ ಒದಗಿಸಿದ್ದು ವಿದ್ಯುಚ್ಛಕ್ತಿಯನ್ನು ಒದಗಿಸಲು ಜಲಮಂಡಲಿಗೂ ಅಗತ್ಯವಾದ ಹಣವನ್ನು ಒದಗಿಸಲಾಗಿದೆ

ಶ್ರೀ ಎಂ.ಪಿ. ಕೇಶವಮೂರ್ತಿ.—ಈ ಬಡಾವಣೆಯನ್ನು 1975ರಲ್ಲಿ ರಚಿಸಿದ್ದಾರೆ. ಆದರೆ 10 ವರ್ಷಗಳಿಂದ ಆ ಬಡಾವಣೆಯಲ್ಲಿರತಕ್ಕ ಜನರಿಗೆ ನೀರನ್ನಾಗಲೀ ದೀಪವನ್ನಾಗಲಿ ಕೊಡದೆ ಸರ್ಕಾರ ವಿಫಲಗೊಂಡಿದೆ, ಈಗಾಗಲೇ ನಾವೆಲ್ಲರೂ ದಿನನಿತ್ಯ ನೋಡುತ್ತಿರುವ ಹಾಗೆ ಬೆಂಗಳೂರು ನಗರದಲ್ಲಿ ಒಂದು ದಿವಸ ನೀರು ಬಂದರೆ ಎರಡು ದಿವಸ ಬರುವುದಿಲ್ಲ. ಈಗ ಜಲ ಮಂಡಲಿಗೆ ಹಣ ಕಟ್ಟಿರುವುದು ನಿಜ. ಆದರೆ ವಿದ್ಯುತ್ ಮಂಡಲಿಗೆ ಯಾವಾಗ ಕಟ್ಟಿದ್ದೀರೆಂಬುದು ಇಲ್ಲ. ಬೆಂಗಳೂರು ನಗರದಲ್ಲಿ ನೀರಿನ ವ್ಯವಸ್ಥೆ ಸರಿಯಾಗಿ ಆಗಿಲ್ಲದ ಕಾರಣ ಈ ಹೊಸ ಬಡಾವಣೆಯಲ್ಲಿ ಕೊಳವೆ ಬಾವಿಗಳನ್ನಾದರೂ ಹಾಕಿದರೆ ನೀರು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ, ತಮ್ಮ ಮೂಲಕ ಸರ್ಕಾರಕ್ಕೆ ಕೊಳವೆ ಬಾವಿಗಳನ್ನು ಒದಗಿಸಿಕೊಡಬೇಕೆಂದು ಜನರ ಪರವಾಗಿ ಒತ್ತಾಯಿಸುತ್ತಿದ್ದೇನೆ.